# ಶುದ್ಧತೆಯ ಪ್ರಶ್ನೆ

ಶುದ್ಧತೆಯೆನ್ನುವುದು ಪ್ರಧಾನವಾಗಿ ಮನಸ್ಸಿಗೆ ಸಂಬಂಧಿಸಿದ್ದು. ಈ ಮಾನಸಿಕ ಶುದ್ಧತೆ ಮುಖ್ಯವಾಗಿ ವ್ಯಕ್ತಿಯ ಅಂತಃಸಾಕ್ಷಿಯ ಜಾಗೃತಿಯ ಪರಿಣಾಮವಾಗಿ ಮೂಡುತ್ತದೆ. ಅವನ ಅಂತಃಸಾಕ್ಷಿ ಅವನಲ್ಲಿ ಉಂಟುಮಾಡುವ ವಿವೇಕ, ಸಾತ್ವಿಕತೆಗಳು ಶುದ್ಧತೆಯ ಅಂಶವನ್ನು ಗಟ್ಟಿಮಾಡುತ್ತಾ ಹೋಗುತ್ತವೆ. ವ್ಯಕ್ತಿಯ ಹುಟ್ಟು, ಬೆಳೆದ ವಾತಾವರಣ ಮತ್ತು ಅವನು ಕಲಿತ ವಿದ್ಯೆಗಳು ಅವನಲ್ಲಿ ಮಾನಸಿಕ ಶುದ್ಧತೆಯನ್ನು ತರಬಲ್ಲವೆಂಬುದಕ್ಕೆ ಅಂತಹ ಆಶಾದಾಯಕ ಪುರಾವೆಗಳಿಲ್ಲ. ಆಧುನಿಕ ಶಿಕ್ಷಣ ವ್ಯಕ್ತಿಯಲ್ಲಿ ಶುದ್ಧ ಸಂಸ್ಕಾರವನ್ನುಂಟು ಮಾಡಿದಂತೆ ತೋರುವುದಿಲ್ಲ. ಅದು ಮುಖ್ಯವಾಗಿ ವ್ಯಕ್ತಿ ವೃತ್ತಿಪರನಾಗುವಂತೆ ಪೋಷಣೆ ಮಾಡುತ್ತದೆ. ಈ ಅಂಶವನ್ನು ಗಮನಿಸಿಯೇ ಗಾಂಧೀಜಿಯವರು ಬದುಕಿನಲ್ಲಿ ವ್ಯಕ್ತಿಗೆ ಗುರಿಯಷ್ಟೇ, ಅದನ್ನು ತಲುಪುವ ಮಾರ್ಗ ಮುಖ್ಯವೆಂದರು. ಆದರೆ ಇಂದು ಆಧುನಿಕ ಶಿಕ್ಷಣ ಕೇವಲ ಗುರಿಯನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡಿದೆ. ಇದರಿಂದ ಅಶುದ್ಧ ಮಾರ್ಗದಿಂದ ವ್ಯಕ್ತಿ ಗುರಿಯ ಕಡೆ ಸಾಗುತ್ತಾನೆ.

ಶುದ್ಧತೆಗೂ ಸಂಪಾದನೆಗೂ ನಿಕಟವಾದ ಸಂಬಂಧವಿದೆ. ಭೋಗ ಮೂಲ ಉದ್ದೇಶದಿಂದ ಸಂಪಾದಿಸಲ್ಪಡುವ ಸಂಪತ್ತು-ಪದವಿಗಳು ತಾತ್ಕಾಲಿಕ ಸುಖವನ್ನೂ, ತೃಪ್ತಿಯನ್ನೂ ತಂದುಕೊಡುತ್ತವೆ. ಇವುಗಳು ತಮಗೆ ತಾವೇ ಅರ್ಹತೆ ಹಾಗೂ ಗುಣ ಸಂಸ್ಕಾರ ಅನುಭವಗಳ ಆಧಾರದ ಮೇಲೆ ಪ್ರಾಪ್ತವಾದರೆ, ಬರುವ ಸುಖ ಮತ್ತು ತೃಪ್ತಿ ಶಾಶ್ವತವಾಗುತ್ತವೆ. ಆ ಸುಖ ಮತ್ತು ತೃಪ್ತಿ– ಆ ಸ್ಥಾನ ಮತ್ತು ಸಂಪತ್ತಿನ ಕಾರಣದಿಂದಾಗಿ ಸಮಾಜಕ್ಕೆ ಪ್ರಯೋಜನಕಾರಿಯಾಗಿ ಬದುಕಲು, ಕರ್ತವ್ಯವೆಂಬುದು ಕೇವಲ ವೈಯಕ್ತಿಕ ಸಂಪಾದನೆಯ ಕ್ರಿಯೆಯೆಂದು ಭಾವಿಸದೆ ಸಮುದಾಯ ಪರ ಜೀವನ ನಡೆಸಲು ಪ್ರೇರೇಪಿಸುತ್ತವೆ. ಇಂಥ ಕ್ರಿಯೆ ಮತ್ತು ಅನುಭವಗಳಿಂದ ಸಿಗುವ ಸುಖ ಮತ್ತು ತೃಪ್ತಿ ವೈಯಕ್ತಿಕ ನೆಲೆಯನ್ನು ಮೀರಿ ನಿಂತು ಅನಂತದ ಕಡೆ ವ್ಯಾಪಿಸುತ್ತದೆ. ಇಲ್ಲಿ ತನ್ನದೆಂಬುದು ಮಾಯವಾಗಿ ಎಲ್ಲರೂ ತಮ್ಮವರೆಂಬ ಭಾವನೆ ಮೂಡುತ್ತದೆ. ಸಮುದಾಯ ಸುಖವನ್ನು ಬಯಸುವವನ ಮನಸ್ಸು ಸ್ವಾರ್ಥ ಮತ್ತು ಲೋಭಗಳಿಂದ ದೂರವಿರುತ್ತದೆ. ಅವನ ದೃಷ್ಟಿ, ಆಸೆ-ಆಶಯಗಳು ವಿಸ್ತಾರಗೊಂಡಿರುತ್ತವೆ. ಬುದ್ಧ, ಗಾಂಧಿ ಇಂಥ ಸ್ಥಿತಿಗೇರಿದ ಮಹಾತ್ಮರು. ಇಂಥ ಸ್ಥಿತಿಯ ಸಂಪಾದನೆಯನ್ನೇ ನಮ್ಮ ಶಿವಶರಣರು ಶೂನ್ಯ ಸಂಪಾದನೆಯೆಂದು ಕರೆದು ವಿಶಾಲವಾದ ಅರ್ಥ ನೀಡಿದರು. ವ್ಯಕ್ತಿ ತನ್ನ ನೆಲೆಯಿಂದ– ಕುಟುಂಬ ನೆಲೆಯಿಂದ ಬಿಡಿಸಿಕೊಂಡು ಜನರ ಸ್ವತ್ತಾಗಿ ಬಾಳುವ ಪರಿಯಿದು. ಇದು ಶುದ್ಧತೆಯ ನಿಜ ಲಕ್ಷಣ.

'ದೈಹಿಕ ಅಶುದ್ಧತೆಗಿಂತ ಮಾನಸಿಕ ಅಶುದ್ಧತೆ ಕೆಟ್ಟದ್ದು' ಎಂದು ಗಾಂಧೀಜಿ ಹೇಳುತ್ತಾರೆ. ನಮ್ಮ ಸಮಾಜವನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕನ ಮಾಡಿ ಹೇಳಿದ ಮಾತಿದು. ನಮ್ಮ ಜನರು ದೈಹಿಕ ಶುದ್ಧಿಯ ಬಗೆಗೆ ನೀಡುವಷ್ಟು ಪ್ರಾಮುಖ್ಯತೆಯನ್ನು ಮಾನಸಿಕ ಶುದ್ಧತೆಯ ಬಗ್ಗೆ ನೀಡುವುದಿಲ್ಲ. ಪರಧನ, ಪರಸತಿ, ಸ್ಥಾನ ಮಾನಗಳ ಲಾಲಸೆಯಲ್ಲಿ ಸದಾ ಮನಸ್ಸನ್ನು ಅಶುದ್ಧಗೊಳಿಸಿಕೊಂಡಿರುತ್ತಾರೆ. ಧನದ ಮೋಹವಂತೂ ವ್ಯಕ್ತಿಯನ್ನು ಅನೈತಿಕ ಮಾರ್ಗಗಳನ್ನು ತುಳಿಯುವಂತೆ ಮಾಡುತ್ತದೆ; ಸದಾ ಅನ್ಯರಿಗೆ ಮೋಸ ಮಾಡಿ ಬದುಕುವ ಹುನ್ನಾರಗಳನ್ನು ಲೆಕ್ಕ ಹಾಕುತ್ತಿರುತ್ತದೆ. ಮತ್ತೊಂದು ಸಾಮಾನ್ಯ ಉಕ್ತಿ ಹೀಗಿದೆ; 'ನಮ್ಮ ಸಮಾಜದಲ್ಲಿ ದೈಹಿಕ ವ್ಯಭಿಚಾರಿಗಳಿಗಿಂತ ಮಾನಸಿಕ ವ್ಯಭಿಚಾರಿಗಳೇ ಅಧಿಕ'. ವ್ಯಭಿಚಾರಿ ನೇರವಾಗಿ ಮುಚ್ಚುಮರೆ ಇಲ್ಲದೆ, ಕೇವಲ ತನ್ನ ದೈಹಿಕ ತೃಷೆಯನ್ನು ತೀರಿಸಿಕೊಂಡು, ಅನಂತರ ನಿರಾಳವಾಗುತ್ತಾನೆ. ಅಷ್ಟರಮಟ್ಟಿಗೆ ಅವನು ಪಾರದರ್ಶಕ. ಆದರೆ ಸಮಾಜದ ಎದುರು, ಮಾನಿನಿಯರ ಎದುರು ಸಭ್ಯರಂತೆ ವರ್ತಿಸುತ್ತಾ– ಮನಸ್ಸಿನಲ್ಲಿ ಸದಾ ವ್ಯಭಿಚಾರ ವೆಸಗುತ್ತಾ, ಮನಸ್ಸನ್ನು ಕೊಳಕು ರಾಡಿ ಮಾಡಿಕೊಳ್ಳುತ್ತಾ ಬದುಕುವ ವ್ಯಕ್ತಿ ಅತ್ಯಂತ ನೀಚನೂ ಅಪಾಯಕಾರಿಯೂ ಆಗಿರುತ್ತಾನೆ. ಇಂಥವರನ್ನೇ ಗೋಮುಖ ವ್ಯಾಘ್ರರೆಂದು ಕರೆದಿರುವುದು.

ಅನಾದಿಕಾಲದಿಂದಲೂ ಸಮಾಜದ ಮೇಲ್ವರ್ಗದ ಜನರು ದೈಹಿಕ ಶುದ್ಧಿಯ ಹೆಸರಿನಲ್ಲಿ ಮಡಿ ಮೈಲಿಗೆ ಆಚರಿಸುತ್ತಾ, ತಮಗಿಂತ ಕೆಳಗಿನವರನ್ನು ತುಚ್ಛವಾಗಿ ಕಾಣುತ್ತಾ ಬಂದರು. ಇದರಿಂದಾಗಿಯೇ ನಮ್ಮ ದೇಶದಲ್ಲಿ ಅಸ್ಪೃಶ್ಯತೆಯಂಥ ಭೀಕರ ಅಮಾನವೀಯ ಪದ್ಧತಿ ಜಾರಿಗೆ ಬಂದಿತು. ಆದರೆ ಶುದ್ಧತೆಯ ಸೋಗಿನಲ್ಲಿ ಅಮಾನವೀಯವಾಗಿ ನಡೆದುಕೊಂಡ ಜನರಿಗಿಂತ, ವಾರಕ್ಕೋ ಹದಿನೈದು ದಿನಕ್ಕೊ ಸ್ನಾನ ಮಾಡುತ್ತಿದ್ದ ಕೆಳವರ್ಗದ ಜನ ತಮ್ಮದೇ ಆದ ನೈತಿಕ ನೆಲೆಯಲ್ಲಿ ಶುದ್ಧವಾಗಿಯೇ ಬಾಳ್ವೆ ಮಾಡಿದರು. ಏಕೆಂದರೆ ಅವರು ತಮ್ಮ ದೈಹಿಕ ಶ್ರಮದ ಮೂಲಕ ನಿರಂತರವಾಗಿ ದೇಶ ಕಟ್ಟುವ ಕೆಲಸ ಮಾಡುತ್ತಿದ್ದರು.

■ ಶಿಕಾಕು

# ಮಾತೇ ಮುತ್ತು

★ ಜ್ಞಾನವೃಕ್ಷವೆಂಬುದು ಒಳಿತಿನ ಜ್ಞಾನವೃಕ್ಷವಾಗಿರುವಂತೆ ಕೆಡುಕಿನ ಜ್ಞಾನವೃಕ್ಷವೂ ಆಗಿರಬಹುದು. ಮುದ್ರಿತ ಪುಟಗಳಲ್ಲಿ ಸತ್ಯಕ್ಕೆ ಸುಳ್ಳಿಗಿಂತ ಉತ್ತಮವಾದ ಅವಕಾಶವೇನೂ ಇರುವುದಿಲ್ಲ. ವ್ಯಾಪಕವಾಗಿ ಓದುವವರಿಗೆ ಮಾತ್ರ ಈ ಸೂಕ್ಷ್ಮಗ್ರಹಣ ಸಾಮರ್ಥ್ಯವಿರುತ್ತದೆ.

-ಬಿ.ಆರ್.ಅಂಬೇಡ್ಕರ್

★ ಒಂದೇ ಕೆಲಸದಲ್ಲಿ ತೊಡಗಿದವರೆಲ್ಲರೂ ಒಂದೇ ಜಾತಿ.

-ರಾಜೇಂದ್ರ ಪ್ರಸಾದ್

★ ಪ್ರಪಂಚದಲ್ಲಿರುವ ಒಳ್ಳೆಯದು ಒಂದೇ– 'ಜ್ಞಾನ'. ಕೆಟ್ಟದ್ದು ಒಂದೇ– ಅದು 'ಅಜ್ಞಾನ.'

-ಸಾಕ್ರೆಟಿಸ್

★ ಜ್ಞಾನಕ್ಕೆ ಸಮನಾದ ಪವಿತ್ರ ವಸ್ತು ಬೇರೊಂದಿಲ್ಲ.

-ಭಗವದ್ಗೀತೆ

★ ಪ್ರಾರ್ಥನೆ ದೇವರ ಸಮೀಪಕ್ಕೆ ದಾರಿ ಕೊಂಡೊಯ್ಯುತ್ತದೆ.

-ಕುರಾನ್

★ ಹುಟ್ಟು ಸಾವು ಸೃಷ್ಟಿಯ ನಿಯಮ. ಒಬ್ಬರು ಮುಂದೆ, ಇನ್ನೊಬ್ಬರು ಹಿಂದೆ ಹೋಗಲೇಬೇಕು. ಸಂಗೀತ ಸೇವಾ ಮಾಡು. ಅದೊಂದಾ ನಿರಂತರ.

-ಪುಟ್ಟರಾಜ ಗವಾಯಿ

★ ಒಳ್ಳೆಯ ಆರೋಗ್ಯವಿಲ್ಲದಿದ್ದರೆ ನೀವು ಖುಷಿಯಾಗಿರಲಾರಿರಿ. ಬೇನೆ ಎಷ್ಟೇ ಚಿಕ್ಕದಾಗಿರಲಿ, ಅಷ್ಟರಮಟ್ಟಿಗೆ ಅದು ಬದುಕಿನ ಸಂತಸವನ್ನು ಕಡಿಮೆ ಮಾಡಿಬಿಡುತ್ತದೆ.

-ಖುಷವಂತ್ ಸಿಂಗ್

★ ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವು ಲೇಸು.

-ಕನಕದಾಸ

★ ನಾವಿರುವುದೇ ಪ್ರಯತ್ನಿಸಲು, ಸಾಹಸಮಾಡಲು, ಕಾಣಲು, ಸೋಲನ್ನೊಪ್ಪದೆ ಇರಲು.

-ಲಾರ್ಡ್ ಟೆನಿಸನ್

★ ಜಯದ ಗುಟ್ಟು ಗುರಿಯ ಸ್ಥಿರತೆಯಲ್ಲಿದೆ.

-ಡಿಸ್ರೇಲಿ

★ ಜಾತಿ ಧರ್ಮ ಜನಗಳಿಗೆ ನಿತ್ಯ ಸತ್ಯ. ರಾಜ್ಯಾಧಿಕಾರಿಗಳಿಗೆ ನಿತ್ಯೋಪಯೋಗಿ, ವೇದಾಂತಿಗಳಿಗೆ ಸಾಲು ಸುಳ್ಳು.

-ಎಡ್ವರ್ಡ್ ಗಿಬ್ಬನ್

★ ನಮಗೆ ಇಷ್ಟ ಇರುವಂತೆ ನಾವು ಜೀವಿಸುವುದಿಲ್ಲ; ನಮಗೆ ಸಾಧ್ಯ ಇರುವಂತೆ ನಾವು ಜೀವಿಸುತ್ತೇವೆ.

-ಮಿನಾಂಡರ್

★ ಜೀವನವೆಲ್ಲಾ ಬೇವೂ ಬೆಲ್ಲ; ಎರಡೂ ಸವಿವನೆ ಕಲಿಮಲ್ಲ.

-ಕುವೆಂಪು

★ ಸಮುದ್ರದ ದೃಶ್ಯ ಆನಂದಮಯ; ಆದರೆ ದಡದ ಮೇಲಿಂದ ನೋಡುವವರಿಗೇ ಹೊರತು ಒಳಗೆ ಮುಳುಗುವವರಿಗಲ್ಲ.

-ವಿನೋಬಾ ಬಾವೆ

★ ತಪ್ಪಿಲ್ಲದುದನ್ನು ಹುಡುಕುವೆವೆನ್ನುವವನು, ಹಿಂದೆ ಇರದಿದ್ದ, ಇಂದು ಇಲ್ಲದ, ಮುಂದೆ ಬರಲಾರದಂತಹುದನ್ನು ಹುಡುಕುವವನು.

-ಅಲೆಕ್ಸಾಂಡರ್ ಪೋಪ್